ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2018–19** **ದಿನಾಂಕ: 09–07–2018**

# <u>ಪತ್ರಿಕಾ ಪ್ರಕಟಣೆ</u>

ಸಂಖ್ಯೆ 614 /714

## ಸರ್ಕಾರ ರೈತರ ಪರವಾಗಿದೆ– ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ

ಬೆಂಗಳೂರು, ಜುಲೈ 9(ಕರ್ನಾಟಕ ವಾರ್ತೆ)

ರಾಜ್ಯದ ರೈತರ ಸಮಸ್ಯೆಗಳನ್ನು ಒಂದೊಂದಾಗಿ ಪರಿಹರಿಸುವ ನಿಟ್ಟಿನಲ್ಲಿ ಮೊದಲ ಹಂತವಾಗಿ 34,000 ಕೋಟಿ ರೂ.ಗಳ ಎರಡು ಲಕ್ಷ ವರೆಗಿನ ರೈತರ ಸಾಲ ಮನ್ನಾ ಸೇರಿದಂತೆ ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ಜಾರಿಗೆ ತರಲು ಈಗಾಗಲೇ ಕೆಲಸ ಆರಂಭವಾಗಿದ್ದು ಸರ್ಕಾರ ರೈತರ ಪರ ಇದೆ ಎಂದು ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ತಿಳಿಸಿದರು.

ಅವರು ಇಂದು ವಿಧಾನ ಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲೆ ನಡೆದ ಚರ್ಚೆಗೆ ಉತ್ತರಿಸುತ್ತಾ ಮಾತನಾಡಿ ಸರ್ಕಾರ ಕಳೆದ ಮೂರು ದಿನಗಳಿಂದ ಕಲಾಪದಲ್ಲಿ ನಡೆಯುತ್ತಿರುವ ಚರ್ಚೆ, ವಿಮರ್ಶೆ ಹಾಗೂ ಸಲಹೆಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿದ್ದು ಇದರಲ್ಲಿ ಮುಖ್ಯವಾಗಿ ಕೃಷಿ, ಶಿಕ್ಷಣ, ವೈದ್ಯಕೀಯ, ವಿದ್ಯುತ್ ಸೇರಿದಂತೆ ಅನೇಕ ವಿಷಯಗಳ ಮೇಲೆ ವಿರೋಧ ಪಕ್ಷ ಸೇರಿದಂತೆ ಸ್ವ ಪಕ್ಷದವರೂ ಸಹ ಚರ್ಚೆಯಲ್ಲಿ ಪಾಲ್ಗೊಂಡು ಸರ್ಕಾರದ ಗಮನ ಸೆಳೆದಿದ್ದಾರೆ.

ರಾಜ್ಯಪಾಲರ ಭಾಷಣದಲ್ಲಿ ರೈತರಿಗೆ ಹೆಚ್ಚು ಒತ್ತು ನೀಡಲಾಗಿದೆ ಹಾಗೂ ಸರ್ಕಾರ ಹೊಸದಾಗಿದ್ದು ಸಾಧನೆಗಳಿರುವುದಿಲ್ಲ, ಮುಂದಿನ ಭಾಷಣದಲ್ಲಿ ಸಾಧನೆಗಳನ್ನು ಉಲ್ಲೇಖಿಸಲಾಗುವುದು. ಸರ್ಕಾರದ ಬಗ್ಗೆ ಯಾವುದೇ ಆತಂಕ ಬೇಡ. ಮುಂದಿನ 5 ವರ್ಷ ಸರ್ಕಾರವನ್ನು ಸುಗಮವಾಗಿ ನಡೆಸಲಾಗುವುದು. ಸರ್ಕಾರ ರೈತರ ಪರವಾಗಿದ್ದು ಅವರ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಹರಿಸಲಾಗುವುದು. ಈ ಸರ್ಕಾರದ ಮೊದಲ ಆದ್ಯತೆ ರೈತ ಉಳಿಯಬೇಕು.

ಸಾಲ ಮನ್ನದ ಜಾತಿವಾರು ವಿವರಣಾ ಪಟ್ಟಿಯ ಬಗ್ಗೆ ಮಾಧ್ಯಮಗಳಲ್ಲಿ ಹರಿದಾಡಿದ ಸುದ್ದಿಗಳಿಗೆ ಆಕ್ಷೇಪ ವ್ಯಕ್ತಪಡಿಸಿದ ಅವರು ರೈತರಿಗೆ ಹಾಗೂ ಅವರ ಉತ್ಪನ್ನಗಳಿಗೆ ಜಾತಿ ಪಟ್ಟಿ ಲೇಪಿಸದಂತೆ ಮನವಿ ಮಾಡಿದರು.

ಈ ಸಾಲಿನ ಆಯವ್ಯಯದಲ್ಲಿ ನೀಡಿರುವ ಯೋಜನೆಗಳ ಬಗ್ಗೆ ಮುಂದಿನ 8 ತಿಂಗಳ ನಂತರ ಸಾಧನೆಗಳನ್ನು ಚರ್ಚಿಸಲು ತಾವು ಸಿದ್ದವಿರುವುದಾಗಿ ಸದನಕ್ಕೆ ತಿಳಿಸಿದ ಅವರು ನಾನು ರಾಜ್ಯದ ಆರುವರೆ ಕೋಟಿ ಜನತೆಯ ಪ್ರತಿನಿಧಿಯಾಗಿದ್ದು ಯಾವುದೇ ಒಂದು ಜಾತಿಗೆ ನನ್ನನ್ನು ಸೀಮಿತಗೊಳಿಸಬೇಡಿ.

ಅಧಿಕಾರಕ್ಕೆ ಬಂದ ಒಂದು ತಿಂಗಳಲ್ಲಿ ಜಾದೂ ಮಾಡಿ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ. ಸ್ವಲ್ಪ ಸಮಯ ಕೊಡಿ ಹಂತ ಹಂತವಾಗಿ ಸರಿಪಡಿಸಲಾಗುವುದು. ಪ್ರಸಕ್ತ ಮಾವಿನ ಬೆಳೆಗಾರರ ಸಮಸ್ಯೆ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ನೆರೆ ರಾಜ್ಯಗಳಾದ ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದಲ್ಲಿ ಅಳವಡಿಸಿರುವ ಸಂಸ್ಕರಣ ಘಟಕಗಳ ಸಹಾಯ ಪಡೆಯಲು ಪ್ರಯತ್ನಿಸಲಾಗುತ್ತಿದ್ದು ರಾಜ್ಯದಲ್ಲಿ ಹೆಚ್ಚಿನ ಸಂಸ್ಕರಣಾ ಘಟಕಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸಂಖ್ಯೆ 615 /715

## ಅರಣ್ಯ ಪ್ರದೇಶಗಳಲ್ಲಿ ಬೆಂಕಿ ಪ್ರಕರಣಗಳಿಂದ ಹೆಚ್ಚಿನ ಹಾನಿ ಸಂಭವಿಸಿಲ್ಲ–

## ಅರಣ್ಯ ಸಚಿವ ಆರ್. ಶಂಕರ್

ಬೆಂಗಳೂರು, ಜುಲೈ 9(ಕರ್ನಾಟಕ ವಾರ್ತೆ)

ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಉಂಟಾಗಿರುವ ಅರಣ್ಯ ಬೆಂಕಿ ಪ್ರಕರಣಗಳು ಬಹುತೇಕ ನೆಲಮಟ್ಟದ ಪ್ರಕರಣಗಳಾಗಿದ್ದು ಹೆಚ್ಚಿನ ಹಾನಿ ಸಂಭವಿಸಿರುವುದಿಲ್ಲ. 2015 ನೇ ಸಾಲಿನಲ್ಲಿ ಒಟ್ಟು 589 ಪ್ರಕರಣಗಳು ದಾಖಲಾಗಿದ್ದು 168.67 ಹೆಕ್ಟೇರ್‌ಗಳಷ್ಟು ಅರಣ್ಯ ಪ್ರದೇಶ ಹಾನಿಗೊಳಗಾಗಿದೆ. 2016 ರಲ್ಲಿ 913 ಪ್ರಕರಣಗಳು ಹಾಗೂ 278.68 ಹೆಕ್ಟೇರ್ ಪ್ರದೇಶ ಮತ್ತು 2017 ರಲ್ಲಿ 925 ಪ್ರಕರಣಗಳು ಹಾಗೂ 6976.85 ಹೆಕ್ಟೇರ್ ಅರಣ್ಯ ಪ್ರದೇಶ ಹಾನಿಗೊಳಗಾಗಿದ ಎಂದು ಅರಣ್ಯ, ಪರಿಸರಿ ಮತ್ತು ಜೀವಿಶಾಸ್ತ್ರ ಸಚಿವ ಆರ್. ಶಂಕರ್ ಅವರು ಸದನಕ್ಕೆ ತಿಳಿಸಿದರು.

ಇಂದು ಅವರು ವಿರೋಧ ಪಕ್ಷದ ಕೆ.ಎಸ್. ಈಶ್ವರಪ್ಪ ಅವರು ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾಡ್ಗಿಚ್ಚಿನಿಂದ ಉಂಟಾಗಿರುವ ಹಾನಿ ಮತ್ತು ನಷ್ಟಗಳೇನು ಎಂಬ ಲಿಖಿತ ರೂಪದ ಪ್ರಶ್ನೆಗೆ ಉತ್ತರಿಸಿದ ಅವರು ಕಳೆದ ಮೂರು ವರ್ಷಗಳಲ್ಲಿ ರಕ್ಷಿತಾರಣ್ಯ ಪ್ರದೇಶಗಳಲ್ಲಿ ಒಣಗಿದ ಹುಲ್ಲು ಮತ್ತು ಒಣಗಿ ಬಿದ್ದಿರುವ ಕೆಲವೊಂದು ಮರಗಳು ಸುಟ್ಟಿದ್ದು, ವನ್ಯಪ್ರಾಣಿಗಳ ಪ್ರಾಣ ಹಾನಿಯಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಹಾನಿಗೊಳಗಾದ ಸದರಿ ಪ್ರದೇಶದಲ್ಲಿದ್ದ ಸರಿಸೃಪಗಳಾದ ಉರಗ ಸಂತತಿ, ಮೊಟ್ಟೆಗಳು, ಸಣ್ಣ ಪ್ರಾಣಿ/ಪಕ್ಷಿಗಳು, ಹುಳ/ಕೀಟ ಮುಂತಾದವುಗಳಿಗೆ ಹಾನಿ ಉಂಟಾಗಿರುವ ಸಾಧ್ಯತೆ ಇರುತ್ತದೆ. ಕಾಡ್ಗಿಚ್ಚಿನಿಂದ ಅರಣ್ಯ ಮತ್ತು ವನ್ಯಜೀವಿಗಳನ್ನು ರಕ್ಷಿಸಲು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವನ್ಯ ಜೀವಿಗಳ ಹಾವಳಿಯಿಂದ ಉಂಟಾದ ಬೆಳೆಹಾನಿ ಪ್ರಕರಣಗಳು ಹಾಗೂ ದಯಾತ್ಮಕ ಧನ ಪಾವತಿಸಿದ ವಿವರವನ್ನು ಸದನಕ್ಕೆ ಸಲ್ಲಿಸಿದ ಅವರು ವನ್ಯಜೀವಿಗಳ ರಕ್ಷಣೆಗಾಗಿ ಅರಣ್ಯ ಇಲಾಖೆ ವೈಜ್ಞಾನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ ಎಂದು ಹೇಳಿದರು.

ಸಂಖ್ಯೆ 616/716

## ನೂತನವಾಗಿ ಘೋಷಿಸಲಾದ 50 ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧದ ಕಟ್ಟಡ

ಬೆಂಗಳೂರು, ಜುಲೈ 9(ಕರ್ನಾಟಕ ವಾರ್ತೆ)

ಕಳೆದ ಆರ್ಥಿಕ ಸಾಲಿನಲ್ಲಿ ರಾಜ್ಯದಲ್ಲಿ ನೂತನವಾಗಿ ಘೋಷಿಸಲಾದ 50 ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧದ ಕಟ್ಟಡ ಕಾಮಗಾರಿಗಳಿಗೆ ಈಗಾಗಲೇ ತಾಲ್ಲೂಕುಗಳಲ್ಲಿ ಸ್ಥಳ ಗುರುತಿಸಲಾಗಿದೆ. ಇನ್ನು ಕೆಲವು ಕಡೆ ಸ್ಥಳ ಗುರುತಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಕಂದಾಯ ಸಚಿವರ ಆರ್.ವಿ. ದೇಶಪಾಂಡೆ ಅವರು ತಿಳಿಸಿದರು.

ಇಂದು ಸದನದಲ್ಲಿ ಹೊಸ ತಾಲ್ಲೂಕುಗಳ ಅಭಿವೃದ್ಧಿ ಕುರಿತಂತೆ ಕಾರ್ಕಳ ಶಾಸಕ ವಿ. ಸುನೀಲ್‌ಕುಮಾರ್ ಹಾಗೂ ಅನೂರ್ ಶಾಸಕ ಆರ್. ನರೇಂದ್ರ ಅವರು ಕೇಳಿದ ಪ್ರಶ್ನೆಗೆ ಉತ್ತರ ನೀಡಿ ಮಾತನಾಡಿದ ಸಚಿವರು ಜಿಲ್ಲಾ ಹಂತದಲ್ಲಿ ಸ್ಥಳಗುರುತಿಸಿ ಅಂದಾಜು ಪಟ್ಟಿ ಮತ್ತು ನಕ್ಷೆಯೊಂದಿಗೆ ಪ್ರಸ್ತಾವನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿದ ಕೂಡಲೇ ಅನುದಾನ ಲಭ್ಯತೆಯನ್ನಾಧರಿಸಿ ಹೊಸ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಹೊಸದಾಗಿ ಘೋಷಿಸಲಾದ 50 ತಾಲ್ಲೂಕುಗಳಿಗೆ ಕಾರ್ಯಾರಂಭ ಮತ್ತು ಆಡಳಿತಾತ್ಮಕ ಪ್ರಕ್ರಿಯೆ ಪ್ರಾರಂಭಿಸಲು ತಲಾ ರೂ. 10.00 ಲಕ್ಷಗಳ ಅನುದಾನವನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ ಎಂದು ಸದನಕ್ಕೆ ತಿಳಿಸಿದರು.

ಸಂಖ್ಯೆ 617/717

## ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಲಕ್ಷಕ್ಕಿಂತ ಹೆಚ್ಚು ಕೈಗಾರಿಕೆಗಳು ನೋಂದಣಿ
## -ಸಚಿವ ಎಸ್.ಆರ್. ಶ್ರೀನಿವಾಸ್

ಬೆಂಗಳೂರು, ಜುಲೈ 9(ಕರ್ನಾಟಕ ವಾರ್ತೆ)

ಕಳೆದ ಮೂರು ವರ್ಷಗಳಲ್ಲಿ 2017-18 ನೇ ಸಾಲಿನವರೆಗೆ 1,13,308 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳು ನೋಂದಣಿಯಾಗಿದ್ದು ರೂ. 29,196 ಕೋಟಿ ಬಂಡವಾಳ ಹೂಡಿಕೆಯೊಂದಿಗೆ 11,71,148 ಉದ್ಯೋಗಾವಕಾಶಗಳನ್ನು ಸೃಜಿಸಲಾಗಿದೆ ಎಂದು ಸಣ್ಣ ಕೈಗಾರಿಕೆ ಸಚಿವ ಎಸ್.ಆರ್. ಶ್ರೀನಿವಾಸ್ ಅವರು ತಿಳಿಸಿದರು.

ಇಂದು ಸದನದಲ್ಲಿ ನಡೆದ ಪ್ರಶ್ನೋತ್ತರ ವೇಳೆಯಲ್ಲಿ ಶಾಂತಿನಗರದ ಶಾಸಕ ಎನ್.ಎ. ಹ್ಯಾರಿಸ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿ ಮಾತನಾಡಿದ ಸಚಿವರು ಇನ್‌ವೆಸ್ಟ್ ಕರ್ನಾಟಕ-2016, ಪ್ರವಾಸಿ ಭಾರತೀಯ ದಿವಸ್ -2017, ಏರ್‌ಷೋ ಮೇಕ್ ಇನ್ ಇಂಡಿಯಾ/ಮೇಕ್ ಇನ್ ಕರ್ನಾಟಕ, ರಾಷ್ಟ್ರೀಯ ಮಟ್ಟದ "ಮಾರಾಟಗಾರರ ಅಭಿವೃದ್ದಿ ಮತ್ತು ಹೂಡಿಕೆದಾರರ ಶೃಂಗಸಭೆ 2017" ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕೈಗಾರಿಕಾ ವಲಯಗಳ ಮೂಲಕ ಉದ್ಯೋಗ ಸೃಷ್ಠಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಅನುವಾಗುವಂತೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ರೋಡ್ ಶೋಗಳನ್ನು ಆಯೋಜಿಸಿದ್ದು, ರಾಜ್ಯಕ್ಕೆ ಬಂಡವಾಳ ಹೂಡಿಕೆದಾರರನ್ನು ಆಹ್ವಾನಿಸಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಜಿಲ್ಲಾ ಮಟ್ಟದ ಹೂಡಿಕೆದಾರರ ಸಮಾವೇಶಗಳನ್ನು ನಡೆಸಲಾಗಿದೆ. ಐಟಿಐ, ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಇತರೆ ನಿರುದ್ಯೋಗ ಯುವಜನರಿಗೆ ವಿಶೇಷವಾಗಿ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳಿಗೆ ಬಂಡವಾಳ ಹೂಡಿಕೆ ಸಹಾಯಧನ ರೂ. 320.50 ಕೋಟಿ, ಭೂ ಪರಿವರ್ತನೆ ಶುಲ್ಕದ ಮರುಪಾವತಿ ರೂ. 9.96 ಕೋಟಿ, ತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಸಹಾಯಧನ ರೂ. 10.08 ಕೋಟಿ ಮತ್ತು ಕಳೆದ ಮೂರು ವರ್ಷಗಳಲ್ಲಿ ಕೆ.ಎಸ್.ಎಫ್.ಸಿ. ಮೂಲಕ ಬಡ್ಡಿ ಸಹಾಯಧನ ರೂ. 7.69 ಕೋಟಿ ನೀಡಲಾಗಿದೆ ಎಂದು ಹೇಳಿದರು.

ಸಂಖ್ಯೆ 618/718

**<u>ವಿಧಾನ ಪರಿಷತ್ತಿನಲ್ಲಿಂದು:</u>**

## <u>ಆರೋಗ್ಯ ಕರ್ನಾಟಕ ಹೆಲ್ತ್ ಸ್ಕೀಂಗೆ ಚಾಲನೆ</u>

ಬೆಂಗಳೂರು, ಜುಲೈ 9 (ಕರ್ನಾಟಕ ವಾರ್ತೆ)

ಆರೋಗ್ಯ ಕರ್ನಾಟಕ ಎಂಬ  ಯೂನಿವರ್ಸಲ್ ಹೆಲ್ತ್ ಸ್ಕೀಂ ಅನ್ನು 11 ಪ್ರಮುಖ ಆಸ್ಪತ್ರೆಗಳಲ್ಲಿ ದಿನಾಂಕ: 5–3–2018 ರಿಂದ ಅನುಷ್ಠಾನಗೊಳಿಸಲಾಗಿದ್ದು, ದಿನಾಂಕ: 1–6–2018 ರಿಂದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಜಾರಿಗೊಳಿಸಲಾಗುತ್ತಿದೆ ಎಂದು ಸಚಿವ ಶಿವಾನಂದ ಎಸ್ ಪಾಟೀಲ್ ಅವರು ತಿಳಿಸಿದರು.

ವಿಧಾನ ಪರಿಷತ್ ಸದಸ್ಯರಾದ ಐವನ್ ಡಿಸೋಜಾ ಅವರು ಕೇಳಿದ  ಪ್ರಶ್ನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶಿವಾನಂದ ಎಸ್ ಪಾಟೀಲ್ ಅವರು ಉತ್ತರಿಸಿ ಮಾತನಾಡಿ ಈ ಹಿನ್ನಲೆಯಲ್ಲಿ 471 ಖಾಸಗಿ ಆಸ್ಪತ್ರೆಗಳನನು ತಾತ್ಕಾಲಿಕವಾಗಿ ನೊಂದಾವಣೆ ಮಾಡಲಾಗಿದೆ ಹಾಗೂ ಚಿಕಿತ್ಸೆ ನೀಡಲು ಅವಕಾಶವಿರುತ್ತದೆ.  ಜೊತೆಗೆ 350 ಸರ್ಕಾರಿ ಆಸ್ಪತ್ರೆಗಳನ್ನು ಚಿಕಿತ್ಸೆ ಒದಗಿಸುವ ಸಲುವಾಗಿ ಎಂಪ್ಯಾನೆಲ್ ಮಾಡಲಾಗಿದೆ.

ಕೇಂದ್ರ ಸಹಭಾಗಿತ್ವದೊಂದಿಗೆ ಜಾರಿಯಲ್ಲಿರುವ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯು ದಿನಾಂಕ: 31–08–2018 ರವರೆಗೆ ನೋಂದಾವಣೆಗೊಂಡಿರುವ ಕುಟುಂಬಗಳಿಗೆ ಜಾರಿಯಲ್ಲಿರುತ್ತದೆ.  ಹಿಂದೆ ಜಾರಿಯಲ್ಲಿದ್ದ 6 ಆರೋಗ್ಯ ಯೋಜನೆಗಳಾದ ವಾಜಪೇಯಿ ಆರೋಗ್ಯಶ್ರೀ, ರಾಜೀವ್ ಆರೋಗ್ಯ ಭಾಗ್ಯ, ಮುಖ್ಯಮಂತ್ರ ಸಾಂತ್ವನ ಹರೀಶ್ ಯೋಗಜನೆ, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕರ (ಆರ್.ಬಿ.ಎಸ್.ಕೆ.)  ಸುರಕ್ಷಾ ಯೋಜನೆ ಮತ್ತು ಯಶಸ್ವಿನಿ ಯೋಜನೆಗಳನ್ನು ವಿಲೀನಗೊಳಿಸಿ “ಆಟೋಗ್ಯ ಕರ್ನಾಟಕ” ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ಸಂಖ್ಯೆ 619/719

# ಸ್ಥಳೀಯ ಸಂಸ್ಥೆಗಳಿಂದ ತೆರಿಗೆ ವಸೂಲಾತಿಗೆ ಕ್ರಮ

ಬೆಂಗಳೂರು, ಜುಲೈ 9 (ಕರ್ನಾಟಕ ವಾರ್ತೆ)

ಗ್ರಾಮ ಪಂಚಾಯಿತಿಗಳು ತೆರಿಗೆ ಗಳನ್ನು ವಿಧಿಸುವ, ಪರಿಷ್ಕರಿಸುವ ಹಾಗೂ ವಸೂಲಾತಿ ಬಗ್ಗೆ ಮೇಲ್ವಿಚಾರಣೆ ಮಾಡಲು ಪ್ರತಿ ತಿಂಗಳು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಕೃಷ್ಣ ಬೈರೇಗೌಡ ಅವರು ಸದನಕ್ಕೆ ತಿಳಿಸಿದರು

ಸಂಖ್ಯೆ 620/720

# ಕೃಷಿ ವಿ.ವಿ. ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರದ ಸ್ಪಂದನೆ

ಬೆಂಗಳೂರು, ಜುಲೈ 9 (ಕರ್ನಾಟಕ ವಾರ್ತೆ)

ಕೃಷಿ ವಿಶ್ವ ವಿದ್ಯಾನಿಲಯಗಳ ವಿದ್ಯಾರ್ಥಿಗಳ ಸಮಸ್ಯೆಗಳ ನಿವಾರಣೆಗೆ ಸರ್ಕಾರ ಬದ್ಧವಾಗಿದ್ದು, ಶೀಘ್ರದಲ್ಲೇ ಈ ಬಗ್ಗೆ ಚರ್ಚಿಸಲು ಜಂಟಿ ಸದನ ಸಮಿತಿ ಮೂಲಕ ಚರ್ಚಿಸಿ ಸೂಕ್ತಕ್ರಮ ಕೈಗೊಳ್ಳಲಾಗುವುದು ಎಂದು ಕೃಷಿ ಸಚಿವರಾದ ಎನ್.ಹೆಚ್. ಶಿವಶಂಕರ ರೆಡ್ಡಿ ಅವರು ಸದನಕ್ಕೆ ತಿಳಿಸಿದರು.

ಸಂಖ್ಯೆ 621/721

# ಬಿ.ಎಸ್.ಎಫ್‌ನಲ್ಲಿ ವಿಕಲಚೇತನರಿಗೆ ಕ್ರೀಡಾ ತರಬೇತಿ ಶಿಬಿರಕ್ಕೆ ಚಾಲನೆ

ಬೆಂಗಳೂರು, ಜುಲೈ 9(ಕರ್ನಾಟಕ ವಾರ್ತೆ)

ವಿಕಲಚೇತನರಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತಂದು ಅವರಿಗೆ ಕ್ರೀಡಾ ಉತ್ಸಾಹ ಹಾಗೂ ಸಾಮರ್ಥ್ಯವನ್ನು ಹೆಚ್ಚಿಸುವುದು ಬಹಳ ಮುಖ್ಯ ಎಂದು ಬೆಂಗಳೂರು ಪೊಲೀಸ್ ಆಯುಕ್ತರಾದ ಟಿ. ಸುನೀಲ್‌ಕುಮಾರ್ ಅಭಿಪ್ರಾಯಪಟ್ಟರು.

ಅವರು ಇಂದು ಯಲಹಂಕದ ಬಿ.ಎಸ್.ಎಫ್ ತರಬೇತಿ ಸಂಸ್ಥೆಯಲ್ಲಿ ವಿಕಲಚೇತನರಿಗೆ ಹಮ್ಮಿಕೊಳ್ಳಲಾದ 3 ನೇ ರಾಜ್ಯಮಟ್ಟದ ದಿವ್ಯಾಂಗ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಈ ಶಿಬಿರವು ವಿಕಲಚೇತನ ಯೋಧರಿಗೆ ಹಾಗೂ ನಾಗರೀಕರಿಗೆ ಹಮ್ಮಿಕೊಳ್ಳಲಾಗಿದ್ದು, ಸುಮಾರು 65 ಕ್ಕೂ ಹೆಚ್ಚು ಜನ ಪಾಲ್ಗೊಳ್ಳಲ್ಲಿದ್ದಾರೆ. ಶಿಬಿರ ಜುಲೈ 9 ರಿಂದ 13 ರವರೆಗೆ ಬಿಎಸ್‌ಎಫ್ ಯಲಹಂಕದಲ್ಲಿ ನಡೆಯಲಿದೆ. ಇದರಲ್ಲಿ ಕ್ರೀಡೆಗಳಾದ ಶೂಟಿಂಗ್, ಲಾಂಗ್ ಟೆನಿಸ್, ಸ್ವಿಮ್ಮಿಂಗ್, ಸೈಕ್ಲಿಂಗ್, ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಅಥ್ಲೆಟಿಕ್ಸ್, ವ್ರೆಸ್ಲಿಂಗ್ ಹಾಗೂ ಕುದುರೆಸವಾರಿಗಳಲ್ಲಿ ತರಬೇತಿ ನೀಡಲಾಗುವುದು. ನಂತರ ಇವರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಪದಕಗಳನ್ನು ಗೆಲ್ಲಬಹುದು.

ಈಗಾಗಲೇ ಅನೇಕ ಯೋಧರು ರಾಷ್ಟ್ರ ಹಾಗೂ ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಕಳೆದ ವರ್ಷಗಳಲ್ಲಿ ಭಾಗವಹಿಸಿ ಅನೇಕ ಪದಕಗಳನ್ನು ಗೆದ್ದಿದ್ದಾರೆ. ಈ ವಿಕಲಚೇತನರಿಗೆ ತರಬೇತಿಯ ಜೊತೆಗೆ

ಆತ್ಮಸ್ಥೈರ್ಯ ಹಾಗೂ ನೈತಿಕ ಬೆಂಬಲ ಸಹ ನೀಡುವುದರಿಂದ ಮುಂದೆ ಅವರು ಹೆಚ್ಚು ಸಫಲರಾಗಿ ಕೆಲಸ ನಿರ್ವಹಿಸಬಲ್ಲರು ಎಂದರು.

ಬಿ.ಎಸ್.ಎಫ್. ಯೋಧರು ತಮ್ಮ ಜೀವನ ಹಂಗನ್ನೂ ಲೆಕ್ಕಿಸದೇ ವಾಘಾ ಗಡಿ, ಮಾವೋ ಪೀಡಿತ ಪ್ರದೇಶ, ಕಾಶ್ಮೀರ ಮುಂತಾದ ಸಮರ್ಥವಾಗಿ ಕೆಲಸ ನಿರ್ವಹಿಸಿದ್ದಾರೆ ಎಂದು ಶ್ಲಾಘಿಸಿದರು.

ಆದಿತ್ಯಾ ಸಂಸ್ಥೆಯ ಆದಿತ್ಯಾ ಮೆಹ್ತಾ ಸಹ ಈ ಶಿಬಿರಕ್ಕೆ ಹೆಚ್ಚು ನೆರವು ನೀಡಿದ್ದಾರೆ. ಕಾರ್ಯಕ್ರಮದಲ್ಲಿ ಬಿ.ಎಸ್.ಎಫ್ ತರಬೇತಿ ಸಂಸ್ಥೆ ಐಜಿ ಪಿ.ಎಸ್.ಆರ್. ಆಂಜನೇಯಲು, ಆದಿತ್ಯಾ ಮೆಹ್ತಾ , ಬಿಎಸ್ಎಫ್ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಸಂಖ್ಯೆ 622/722

## ಇನೋವೇಟಿವ್ ವಿಡಿಯೋ ಕ್ಲಿಪ್/ಚಲನಚಿತ್ರ ಸ್ವರ್ಧಾತ್ಮಕ ಸ್ವರ್ಧೆ

ಬೆಂಗಳೂರು, ಜುಲೈ 9(ಕರ್ನಾಟಕ ವಾರ್ತೆ)

ಅರಣ್ಯ ಇಲಾಖೆಯು ಅರಣ್ಯ ಹಾಗೂ ವನ್ಯಜೀವಿಗೆ ಸಂಬಂಧಿಸಿದಂತೆ ಉತ್ತಮ ಮಾಹಿತಿಗಳನ್ನು ಇನೋವೇಟಿವ್ ವಿಡಿಯೋ ಕ್ಲಿಪ್/ಚಲನಚಿತ್ರದ ಮೂಲಕ ಸಾರ್ವಜನಿಕರ ಗಮನಕ್ಕೆ ನೇರವಾಗಿ ತಲುಪಿಸಲು ವಿಡಿಯೋ ಕ್ಲಿಪ್/ಚಲನಚಿತ್ರಗಳ ಸ್ವರ್ಧೆಯನ್ನು ಆಯೋಜಿಸಿರುತ್ತದೆ.

ಸದರಿ ಸ್ವರ್ಧೆಯಲ್ಲಿ ಭಾಗವಹಿಸಲು ಅರಣ್ಯ ಇಲಾಖೆಯ ಅಂತರ್ಜಾಲ www://aranya.gov.in ರಲ್ಲಿ ಅಪ್‌ಲೋಡ್ ಮಾಡಿರುವ ಅನುಬಂಧದಲ್ಲಿ ಸೂಚಿಸಿರುವ ಹಾಗೂ ವಿಧಿಸಿರುವ ಕಟ್ಟಳೆಗಳಂತೆ ವಿಡಿಯೋ ಕ್ಲಿಪ್/ಚಲನಚಿತ್ರವನ್ನು ದಿನಾಂಕ: 31-7-2018 ರೊಳಗೆ, ಮುದ್ರಿತ ಲಕೋಟೆಯಲ್ಲಿ (ಲಕೋಟೆಯ ಮೇಲ್ಭಾಗದಲ್ಲಿ "ಕರ್ನಾಟಕ ಅರಣ್ಯ ಇಲಾಖೆ ವಿಡಿಯೋ ಕ್ಲಿಪ್/ಚಲನಚಿತ್ರ" ಎಂದು ನಮೂದಿಸಿ) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಂಪರ್ಕ ಮತ್ತು ಮಾಹಿತಿ) ಬೆಂಗಳೂರು ಇವರಿಗೆ ಕಳುಹಿಸಬೇಕಾಗಿರುತ್ತದೆ.

ಆಸಕ್ತಿಯುಳ್ಳ ಪ್ರತಿ ಒಬ್ಬ ಸ್ವರ್ಧಿ/ತಂಡಗಳು/ಎಲ್ಲಾ ಸಂಸ್ಥೆಗಳು ಈ ಸ್ವಧೇಯಲ್ಲಿ ಭಾಗವಹಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಖ್ಯೆ 623/723

## ಎಸಿಬಿ ದಾಳಿ

**ಬೆಂಗಳೂರು, ಜುಲೈ 9(ಕರ್ನಾಟಕ ವಾರ್ತೆ)**

ದಿನಾಂಕ: **09.07.2018** ರಂದು ಬಳ್ಳಾರಿ ಭ್ರಷ್ಟಾಚಾರ ನಿಗ್ರಹ ದಳವು ಶ್ರೀ.ದುರ್ಗಪ್ಪ, ಎಎಓ, ವಿಜಯನಗರ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಹಾಸ್ಪಿಟಲ್, ಬಳ್ಳಾರಿ ಎಂಬುವವರು ತಮ್ಮ ಬಲ್ಲ ಮೂಲಗಳಿಗಿಂತ ಅಸಮತೋಲನ ಆಸ್ತಿ–ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ ಇವರ ಬ್ರಹ್ಮಯ್ಯ ಕಾಲೋನಿ, ವಿಶ್ವೇಶರನಗರದ ವಾಸದ ಮನೆ, ಎಂ.ವಿ ನಗರ, ಕಾಪಗಲ್ ರಸ್ತೆ, ಬಳ್ಳಾರಿಯಲ್ಲಿರುವ ತಂಗಿಯ ಮನೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿಗಳ ಮೇಲೆ ಇಂದು ದಾಳಿ ನಡೆಸಿರುತ್ತದೆ.

ಬಳ್ಳಾರಿ ಎಸಿಬಿ ಪೊಲೀಸ್ ಠಾಣೆಯ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರರ ವಿರುದ್ದ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ–ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸಂಖ್ಯೆ 624/724

# ACB Raid

Bengaluru, July 9(Karnataka Information)

Today ACB has conducted raids over the properties of **Shri. Durgappa Assistant Administrative Officer, Vijaynagar Institute of Medical Science Hospital, Ballari** who is believed to have amassed disproportionate assets beyond his known sources of Income. **Two Places** connected to this official - His place of residence at Brahmayya Colony, Vishweshwar nagar, Ballari, Sisters house at M.V nagar, Kapagal road and office are being searched currently by Ballari ACB teams.

Case against the official mentioned above has been registered at Ballari ACB Police Station. The search and verification of properties by the ACB teams is continued to find out the Source of Income and other possible places for the Search says official press release.

ಸಂಖ್ಯೆ 625/725

# ಅಕ್ಟೋಬರ್ 30 ರಂದು "ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆ"

ಬೆಂಗಳೂರು, ಜುಲೈ 9 (ಕರ್ನಾಟಕ ವಾರ್ತೆ)

ಇಂದಿನ ಆಧುನಿಕ ಜಗತ್ತಿನಲ್ಲಿ ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ, ಯುವಜನರಲ್ಲಿ ಹಾಗೂ ಸಾರ್ವನಿಕರಲ್ಲಿ ಬಿತ್ತುವ ಉದ್ದೇಶದಿಂದ ಮಹಾರಾಷ್ಟ್ರದ ಜಲಗಾಂವ್‌ನ ಗಾಂಧೀ ರಿಸರ್ಚ್ ಫೌಂಡೇಶನ್ ಅವರು "ಗಾಂಧೀ ವಿಚಾರ ಸಂಸ್ಕಾರ ಪರೀಕ್ಷೆ"ಯನ್ನು ಅಕ್ಟೋಬರ್ 30 ರಂದು ಹಮ್ಮಿಕೊಂಡಿದೆ.

ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ ಒಂದು ಹಂತದಲ್ಲಿ ಮತ್ತು ಪದವಿ ವಿದ್ಯಾರ್ಥಿಗಳಿಗೆ ಮತ್ತೊಂದು ಹಂತದಲ್ಲಿ ಪರೀಕ್ಷೆಯನ್ನು ನಡೆಸಲಾಗುವುದು. ಈ ಪರೀಕ್ಷೆಯು ಸಂಸ್ಥೆಗಳ ಹಂತದಲ್ಲಿ ಮತ್ತು ತಾಲ್ಲೂಕು, ಜಿಲ್ಲಾ ಹಂತದಲ್ಲಿ ನಡೆಯುತ್ತದೆ.

ಈ ಪರೀಕ್ಷೆಗಾಗಿ ನೋಂದಯಿಸಿಕೊಂಡ ವಿದ್ಯಾರ್ಥಿಗಳಿಗೆ ಪುಸ್ತಕವನ್ನು ಒದಗಿಸಲಾಗುವುದು. ಪುಸ್ತಕದ ಬೆಲೆಯನ್ನು ಮಾತ್ರ ನೋಂದಣಿ ಶುಲ್ಕವಾಗಿ ಸಂಗ್ರಹಿಸಲಾಗುವುದು. ವಿದ್ಯಾರ್ಥಿಗಳು ಆ ಪುಸ್ತಕಗಳನ್ನು ಓದಿ ನಿಗದಿಪಡಿಸಿದ ದಿನಾಂಕದಂದು ಪರೀಕ್ಷೆಯನ್ನು ಬರೆಯಬೇಕಾಗುತ್ತದೆ.

ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ ಪ್ರಥಮ ಹಂತದಲ್ಲಿ ಹಾಗೂ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ದ್ವಿತೀಯ ಹಂತದಲ್ಲಿ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಈ ಪರೀಕ್ಷೆಯು ತಾಲ್ಲೂಕು, ಜಿಲ್ಲೆ ಮತ್ತು ಸಂಸ್ಥೆಗಳ ಮಟ್ಟದಲ್ಲಿ ನಡೆಯಲಿದೆ.

ಈ ಪರೀಕ್ಷೆಗಾಗಿ ನೋಂದಾಯಿಸಿಕೊಂಡ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಅವರ ವಿದ್ಯಾರ್ಹತೆಗನುಗುಣವಾಗಿ ಪೂರ್ವಭಾವಿಯಾಗಿ ಒದಗಿಸಲಾಗುವುದು. ಪುಸ್ತಕದ ರಿಯಾಯತಿ ಬೆಲೆಯನ್ನು ಮಾತ್ರ ನೋಂದಣಿ ಶುಲ್ಕವಾಗಿ ಸಂಗ್ರಹಿಸಲಾಗುತ್ತಿದೆ. ವಿದ್ಯಾರ್ಥಿಗಳೂ ಆ ಪುಸ್ತಕಗಳನ್ನು ಓದಿ, ನಿಗದಿಪಡಿಸಿದ ದಿನಾಂಕದಂದು ಒಂದು ಗಂಟೆ ಅವಧಿಯ ಪರೀಕ್ಷೆಯನ್ನು ಬರೆಯಬೇಕಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ ಬೆಂಗಳೂರು – 560 001 ದೂರವಾಣಿ 080–22261967 ಅಥವಾ ರಾಜ್ಯ ಸಂಯೋಜಕರು ಡಾ. ಅಬಿದ ಬೇಗಂ – 9035912903 ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ – ಸಂಖ್ಯೆ 9739032600 ಅವರುಗಳ ದೂರವಾಣಿ ಮುಖಾಂತರ ಸಂಪರ್ಕಿಸಬಹುದಾಗಿದೆ.

ಕರ್ನಾಟಕದಲ್ಲಿ ಇದರ ಸಂಯೋಜನೆಯನ್ನು ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್.ಎಸ್.) ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ ವಹಿಸಿಕೊಂಡಿವೆ.

2018–19 ನೇ ಸಾಲಿನ ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆ ಕುರಿತಂತೆ:

- ವಿದ್ಯಾರ್ಥಿಗಳ ನೋಂದಣಿ ದಿನಾಂಕ 20–07–2018 ರಿಂದ
- ವಿದ್ಯಾರ್ಥಿಗಳ ವಿವರ ಹಾಗೂ ಪರೀಕ್ಷಾ ಶುಲ್ಕ DD./NEFT/RTGS ಮೂಲಕ ಪಾವತಿಸಿದ ವಿವರವನ್ನು ಜಲಗಾಂವ್ ವಿಳಾಸಕ್ಕೆ ಹಾಗೂ ಅದರ ಜೆರಾಕ್ಸ ಪ್ರತಿಯನ್ನು ರಾಜ್ಯ ಕಚೇರಿಗೆ ಆಗಸ್ಟ್ 20 ರೊಳಗೆ ಕಳುಹಿಸುವುದು.
- ಸಂಚಾಲಕರಿಗೆ ಕರಪತ್ರ ಮತ್ತಿತರ ಸಾಮಗ್ರಿ ರವಾನಿ ದಿನಾಂಕ 13–09–2018 ರೊಳಗೆ.
- ಪರೀಕ್ಷೆಯ ನಡೆಯುವ ದಿನಾಂಕ: 30–10–2018.
- ಮೌಲ್ಯಮಾಪನ ಮಾಡಿ ರಾಜ್ಯ ಕಚೇರಿಗೆ ಸಂಪೂರ್ಣವಾದ ವಿವರಗಳನ್ನು ಕಳುಹಿಸುವ ದಿನಾಂಕ : 15–11–20183
- ಸಂಚಾಲಕರಿಗೆ ಪ್ರಮಾಣ ಪತ್ರವನ್ನು 30–11–2018 ರೊಳಗೆ ಕಳುಹಿಸಲಾಗುವುದು.
- ಜಿಲ್ಲಾ ಮಟ್ಗಟದ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಮತ್ತು ಸಾವ್ಜನಿಕರಗೆ 3 ದಿನಗಳ ಗಾಂಧಿ ವಿಚಾಗಳ ಅಧ್ಯಯನ ಶಿಬಿರ ಆಯೋಜಿಸಲಾಗುವುದು. ಶಿಬಿರದ ವೆಚ್ಚವನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಭರಿಸುತ್ತದೆ (ದಿನಾಂಕ: ತಿಳಿಸಲಾಗುವುದು)
- ಪದಕ ಪಡೆದ ಜಿಲ್ಲಾ ಮಟ್ಟದ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಮೂರನೇ ವರ್ಷದ ಗಾಂಧಿ ವಿಚಾರ ಸಂಸ್ಕಾರ ಪದವಿ ಮತ್ತು ಸಂಯೋಜನರಿಗೆ ಶಾಲಾ ಕಾಲೇಜುಗಳಿಗೆ ಪ್ರಮಾಣ ಪತ್ರ ನೀಡುವ ಮುಖಾಂತರ ಸನ್ಮಾನಿಸಲಾಗುತ್ತದೆ. (ದಿನಾಂಕ ತಿಳಿಸಲಾಗುವುದು)
- ಅತ್ಯುತ್ತಮ ಶಾಲೆ, ಕಾಲೇಜುಗಳು ಮತ್ತು ಸಂಯೋಜಕರನ್ನು ಬಾ ಬಾಪು 150 ನೇ ವರ್ಷದ ಸಂದರ್ಭವಾಗಿ ಅವರನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಛಾಯಾಚಿತ್ರ ಶೀರ್ಷಿಕೆ:

ಬೆಂಗಳೂರಿನ ಯು.ವಿ.ಸಿ.ಇ ಕಾಲೇಜಿನ ಆವರಣದಲ್ಲಿ ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ ವತಿಯಿಂದ "ಉಚಿತ ಲ್ಯಾಪ್‌ಟಾಪ್ ವಿತರಣಾ ಕಾರ್ಯಕ್ರಮ" ವನ್ನು ಉನ್ನತ ಶಿಕ್ಷಣ ಸಚಿವರಾದ ಜಿ.ಟಿ.ದೇವೇಗೌಡರು ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಿಸಿದರು...